

# ಷರತ್ತುಗಳು ಮತ್ತು ನಿಬಂಧನೆಗಳು

**ಗ್ರಾಹಕರು 11 ತಿಂಗಳ ಮುಂಗಡ ಹಣ ಪಾವತಿಯ ನಂತರ ಸಂಪೂರ್ಣ ಪ್ರಯೋಜನಗಳೊಂದಿಗೆ ಆಭರಣಗಳನ್ನು ಖರೀದಿಸಬಹುದು.**

1) ಚಿನ್ನದ ಖರೀದಿಯ ಮೊದಲು ಕನಿಷ್ಠ ₹10,000 ಮೌಲ್ಯದ ಮುಂಗಡ ಬುಕಿಂಗ್ ಅಡ್ವಾನ್ಸ್ ಹೊಂದಿರಬೇಕು ಮತ್ತು ಯಾವುದೇ ಗರಿಷ್ಠ ಮಿತಿಯಿರುವುದಿಲ್ಲ. ಯಾವುದೇ ಸಂದರ್ಭದಲ್ಲಿ ಈ ಮುಂಗಡ ಹಣವನ್ನು ವರ್ಗಾಯಿಸಲಾಗುವುದಿಲ್ಲ.

2) ಗ್ರಾಹಕರು ತಮ್ಮ ಪಾವತಿಯ ದಿನಾಂಕದಂದು ಅಥವಾ ಕಂಪನಿಯ ಖಾತೆಗೆ ಹಣವನ್ನು ಪಡೆದ ದಿನಾಂಕದಂದು ಕಂಪನಿಯ ಚಾಲ್ತಿಯಲ್ಲಿರುವ ಚಿನ್ನದ ದರದಲ್ಲಿ ಪಾವತಿಸಿದ ಮುಂಗಡಕ್ಕೆ ಸಮನಾದ ಚಿನ್ನದ ಗ್ರಾಂಗಳ ತೂಕದ ಅನುಸಾರ (22 ಕಾರಟ್ ದರದಲ್ಲಿ) ಜಮೂವಣೆಯನ್ನು ಪಡೆಯುತ್ತಾರೆ.

3) 11 ತಿಂಗಳ ಪಾವತಿ ಪೂರ್ಣಗೊಂಡ ನಂತರ ಗ್ರಾಹಕರು ಆಭರಣಗಳನ್ನು ಅವರ ಖಾತೆಯ ಚಿನ್ನದ ತೂಕದ ಮುಂಗಡ ಬುಕಿಂಗ್‌ಗೆ ಸೀಮಿತಗೊಳಿಸಿ ಚಿನ್ನದ ನಾಣ್ಯ ಸೇರಿದಂತೆ 18% ವರೆಗೆ ವಿಎ (ಮೌಲ್ಯ ಸೇರ್ಪಡೆ) ಇಲ್ಲದೇ ತಮ್ಮ ಆಯ್ಕೆಯ ಚಿನ್ನದ ಆಭರಣಗಳನ್ನು ಖರೀದಿಸಲು ಅರ್ಹರಾಗಿರುತ್ತಾರೆ. ಅನ್ವಯಿತ ಹರಳಿನ ದರಗಳನ್ನು ಗ್ರಾಹಕರಿಂದಲೇ ಹೆಚ್ಚುವರಿಯಾಗಿ ಸಂಗ್ರಹಿಸಲಾಗುತ್ತದೆ.

4) ಪ್ರೀ ಬುಕಿಂಗ್‌ನ್ನು ಹಳೆಯ ಚಿನ್ನ, ನಗದು, ಕ್ರೆಡಿಟ್/ಡೆಬಿಟ್ ಕಾರ್ಡ್‌ಗಳು, ಎನ್ ಇಎಫ್ ಟಿ /ಆರ್ ಟಿ ಜಿ ಎಸ್, ಯುಪಿಐ, ಬ್ಯಾಂಕ್ ವರ್ಗಾವಣೆ ಮೂಲಕ ಖಜಾನ ಜ್ಯುವೆಲ್ಲರಿ ಪ್ರೈವೇಟ್ ಲಿಮಿಟೆಡ್. ಮೂಲಕ ಮಾಡಬಹುದು.

5) ಯಾವುದೇ ಬ್ಯಾಂಕ್ ಶುಲ್ಕಗಳನ್ನು ಗ್ರಾಹಕರೇ ಪಾವತಿಸಬೇಕಾಗುತ್ತದೆ.

6) ಪ್ರೀ ಬುಕಿಂಗ್ ಸಂದರ್ಭದಲ್ಲಿ ಪ್ರೀ ಬುಕಿಂಗ್ ಮುಂಗಡ ಮೂಲ ರಶೀದಿಯನ್ನು ಗ್ರಾಹಕರಿಗೆ ನೀಡಲಾಗುತ್ತದೆ.

7) ಆಭರಣಗಳನ್ನು ಖರೀದಿಸುವ ವೇಳೆ ಗ್ರಾಹಕರು ಮೂಲ ಪ್ರೀ ಬುಕಿಂಗ್ ಮುಂಗಡ ಪಾವತಿ ರಶೀದಿಯನ್ನು ಒಪ್ಪಿಸಬೇಕಾಗುತ್ತದೆ.

8) ಈ ಪ್ರೀ ಬುಕಿಂಗ್ ಮೂಲಕ ಭವಿಷ್ಯದಲ್ಲಿ ಖರೀದಿಸಲಾಗುವ ಆಭರಣಗಳನ್ನು ಚಿನ್ನ ತೂಕದ ಪ್ರಕಾರ ಖರೀದಿಸಲಾಗುವುದು ಎಂಬುದರ ಬಗ್ಗೆಗಿನ ಒಪ್ಪಂದವಾಗಿರುತ್ತದೆ.

9) ಈ ಪ್ರೀ ಬುಕಿಂಗ್ ಮುಂಗಡದ ವಿರುದ್ಧವಾಗಿ ಆಭರಣಗಳ ಖರೀದಿಯು ಇತರ ಯಾವುದೇ ಲಭ್ಯವಿರುವ ಯೋಜನೆಗಳು / ಆಫರ್‌ಗಳಿಗೆ ಸಂಪರ್ಕಗೊಂಡಿರುವುದಿಲ್ಲ.

10) ಪಾವತಿಯಾದ ಮುಂಗಡ ಮೊತ್ತ ಯಾವುದೇ ಬಡ್ಡಿಗೆ ಅರ್ಹವಾಗಿರುವುದಿಲ್ಲ.

11) ಗ್ರಾಹಕರು ಮುಂಗಡ ಪಾವತಿಸಿದ ದಿನಾಂಕದಿಂದ 11 ತಿಂಗಳ ಬಳಿಕ ಅಥವಾ 360 ದಿನಗಳೊಳಗಾಗಿ ಆಭರಣವನ್ನು ಖರೀದಿಸಬಹುದು. ಯಾವುದೇ ಸಂದರ್ಭದಲ್ಲಿ ಯಾವುದೇ ಹಣವನ್ನು ರೀಫಂಡ್ ಮಾಡಲಾಗುವುದಿಲ್ಲ.

12) ಗ್ರಾಹಕರು ಭಾರತದಲ್ಲಿರುವ ನಮ್ಮ ಯಾವುದೇ ಖಜಾನ ಜ್ಯುವೆಲ್ಲರಿ ಶೋರೂಮ್‌ನಲ್ಲಿ ಯಾವುದೇ ಆಯ್ದ ಆಭರಣವನ್ನು ಖರೀದಿಸಬಹುದು.

# ಷರತ್ತುಗಳು ಮತ್ತು ನಿಬಂಧನೆಗಳು

13) ಒಂದು ವೇಳೆ, ಗ್ರಾಹಕರು ಮುಂಗಡ ಪಾವತಿಯಾದ 360 ದಿನಗಳೊಳಗಾಗಿ ಆಭರಣ ಖರೀದಿ ಮಾಡದಿದ್ದಲ್ಲಿ, ಗ್ರಾಹಕರು ಅದರ ಡೆಲಿವರಿ ಪಡೆಯುವವರೆಗೆ ಕಂಪನಿಗೆ ಸೇಲ್ ಇನ್‌ವಾಯ್ಸ್ ಅವನ/ಅವಳ ಹೆಸರಿನಲ್ಲಿ ಅನ್ವಯಿತ ಜಿ ಎಸ್ ಟಿ ಯೊಂದಿಗೆ ಚಿನ್ನವನ್ನು ಸೇಫ್ ಕಸ್ಟಡಿಯಲ್ಲಿಡಲು ಅವಕಾಶ ನೀಡಬೇಕಾಗುತ್ತದೆ .

14) ಮುಂಗಡವನ್ನು ಪ್ರೀ ಕ್ಲೋಸ್ ಮಾಡುವ ಆಯ್ಕೆ ಮಾಡಿಕೊಂಡಂತಹ ಗ್ರಾಹಕರು ಕ್ಲೋಸರ್ ಪ್ರಯೋಜನ ಕಾಯ್ದೆಯನುಸಾರ ಪ್ರಯೋಜನ ಪಡೆಯಲು ಅರ್ಹರಾಗುತ್ತಾರೆ.

15) ಗ್ರಾಹಕರು ಪ್ರೀ ಬುಕ್ ಮಾಡಿದ ಚಿನ್ನದ ತೂಕಕ್ಕಿಂತ ಹೆಚ್ಚಿನ ಪ್ರಮಾಣದ ಚಿನ್ನದ ಆಭರಣ ಖರೀದಿಸಿದರೆ, ಅನ್ವಯಿತ ವೇಸ್ಟೇಜ್ (ವಿಎ)ಗೆ ಅನುಗುಣವಾಗಿ ಹೆಚ್ಚುವರಿ ತೂಕಕ್ಕೆ ಗ್ರಾಹಕರೇ ಪಾವತಿಸಬೇಕು.

16) ಯಾವುದಾದರೂ ಬ್ಯಾಲೆನ್ಸ್ ಮುಂಗಡ ಹಣವಿದ್ದಲ್ಲಿ, ಬಿಲ್ಲಿಂಗ್ ನಂತರ ಯಾವುದೇ ನಗದು ಹಣ ರೀಫಂಡ್ ಮಾಡಲಾಗುವುದಿಲ್ಲ ಆದರ ಬದಲಾಗಿ ಚಿನ್ನದ ಆಭರಣ ಅಥವಾ ಚಿನ್ನದ ನಾಣ್ಯಗಳನ್ನು ನೀಡಿ ಸರಿಹೊಂದಿಸಲಾಗುವುದು.

17) ವಿಳಾಸ ಮತ್ತು ಮೊಬೈಲ್ ಸಂಖ್ಯೆ ಬದಲಾದಾಗ ಅಥವಾ ಮುಂಗಡ ರಸೀದಿಯು ಕಳೆದುಹೋದಲ್ಲಿ ಗ್ರಾಹಕರು ಕಂಪನಿಗೆ ಸೂಕ್ತ ಕೆವೈಸಿ ವಿವರಗಳೊಂದಿಗೆ ಲಿಖಿತ ರೂಪದಲ್ಲಿ ಮಾಹಿತಿ ನೀಡಬೇಕು.

18) ಗ್ರಾಹಕರು ತಮಗಾಗಿ ಮತ್ತು ತಮ್ಮ ನಾಮಿನಿಗಾಗಿ ಕೆವೈಸಿ ಸಲ್ಲಿಸುವ ಸಮಯದಲ್ಲಿ ನಾಮಿನಿಯೊಬ್ಬರನ್ನು ನೇಮಿಸಿಕೊಳ್ಳಬಹುದು. ಮೈನರ್ ಆಗಿದ್ದಾಗ ನಾಮಿನಿಯು ಪೋಷಕರ ಸ್ಥಾನದಲ್ಲಿ ನಿಲ್ಲಬಹುದು ಮತ್ತು ಸಹಿ ಹಾಕಬಹುದಾಗಿದೆ.

19) ಜಿಎಸ್‌ಟಿ ಮತ್ತು ಇತರ ಯಾವುದೇ ಸರ್ಕಾರಿ ತೆರಿಗೆಗಳನ್ನು ಬಿಲ್ಲಿಂಗ್ /ಡೆಲಿವರಿ ಸಮಯದಲ್ಲಿ ಗ್ರಾಹಕರೇ ಪಾವತಿಸಬೇಕಾಗುತ್ತದೆ.

20) ಗ್ರಾಹಕರ ಸಹಿ, ಐಡಿ ಮತ್ತು ವಿಳಾಸದ ಪುರಾವೆಗಳನ್ನು ಬಿಲ್ಲಿಂಗ್/ಡೆಲಿವರಿ ಸಮಯದಲ್ಲಿ ಪ್ರಮಾಣೀಕರಿಸಲಾಗುವುದು.

21) ಕಂಪನಿ ತನ್ನ ಸ್ವ- ವಿವೇಚನೆಯಲ್ಲಿ ಕಾಲಕಾಲಕೆ ಷರತ್ತು ಮತ್ತು ನಿಬಂಧನೆಗಳನ್ನು ತಿದ್ದುಪಡಿ, ಪರಿಷ್ಕರಣೆ, ಮಾರ್ಪಾಡು, ಸೇರ್ಪಡೆ ಅಥವಾ ಕಡಿತ ಮಾಡಬಹುದಾಗಿದೆ.

22) ಎಲ್ಲಾ ವಿವಾದಗಳು ಚೆನ್ನೈನಲ್ಲಿರುವ ಸಕ್ಷಮ ನ್ಯಾಯಾಲಯದ ವ್ಯಾಪ್ತಿಗೊಳಪಡುತ್ತವೆ.

# ಕ್ಲೋಸರ್ ಪ್ರಯೋಜನಗಳು

| ಕ್ಲೋಸರ್ ದಿನಾಂಕಗಳು | (ವಿ ಎ) ಮೌಲ್ಯ ಸೇರ್ಪಡೆಯ ಪ್ರಯೋಜನಗಳು |
|---|---|
| 331 ದಿನಗಳಿಂದ | 18% ವರೆಗೆ |
| 303 - 330 ದಿನಗಳು | 10% ವರೆಗೆ |
| 241 - 302 ದಿನಗಳು | 9% ವರೆಗೆ |
| 181 - 240 ದಿನಗಳು | 7% ವರೆಗೆ |
| 180 ದಿನಗಳಿಗಿಂತ ಕಡಿಮೆ | ಯಾವುದೇ ಪ್ರಯೋಜನವಿಲ್ಲ |


KHAZANA JEWELLERY

www.khazanajewellery.com

ಬೆಂಗಳೂರು - ಜಯನಗರ : 080-41539900 | ಮಾರತ್ತ ಹಳ್ಳಿ : 080-25400009 • ಬಳ್ಳಾರಿ: 08392-271600 • ಚೆನ್ನೈ - ಟಿ ನಗರ: 044-24364501 | ಕ್ಯಾಥೆಡ್ರಲ್ ರಸ್ತೆ: 044-28117046 ಅಣ್ಣಾನಗರ: 044-42631900 | ವೆಲಚೇರಿ: 044-42163900 • ಕೊಯಮತ್ತೂರು: 0422-4213900 ಸೇಲಂ: 0427-4265900 • ಪುದುಚೇರಿ: 0413-4209900 • ತಿರುನೆಲ್ವೆಲಿ: 0462-4210900 ವೈಜ್ಹಾಗ್(ವಿಶಾಖ ಪಟ್ಟಣಂ) - ದ್ವಾರಕ ನಗರ 1: 0891-6668900 | ದ್ವಾರಕ ನಗರ 2: 0891-6672900 ಗಾಜುವಾಕ: 0891-2573900 • ವಿಜಯವಾಡ: 0866-6643900 • ಗುಂಟೂರು: 0863-6633900 ಕಾಕಿನಾಡ: 0884-6661900 • ರಾಜಮಂಡ್ರಿ: 0883-6656900 • ಭೀಮಾವರಂ: 08816-239901 ತಿರುಪತಿ: 0877-6644900 • ನೆಲ್ಲೂರ್: 0861-2354900 • ಶ್ರೀಕಾಕುಲಂ: 08942-228901 ಒಂಗೋಲ್: 08592-227001 • ಅನಂತಪುರ: 08554-220900 • ವಿಜಯನಗರಂ: 08922-252900 ಕಡಪಾ: 08562-244456 • ಕರ್ನೂಲ್: 08518-221900 • ಅಮಲಪುರಂ: 08856-236900 ಅನಕಪೆಲ್ಲಿ: 08924-222900 • ಗೋಪಾಲಪಟ್ಟಣಂ: 0891-2526900 • ತುನಿ: 08854-255900 ಹೈದ್ರಾಬಾದ್: ಸೋಮಾಜಿಗುಡ: 040-66639900 • ಕುಕಟಪಳ್ಳಿ: 040-40204900 | ಎ ಎಸ್ ರಾವ್ ನಗರ: 040-24889900 | ದಿಲ್ ಸುಖ್ ನಗರ: 040-66461900 | ಚಂದಾನಗರ: 040-23038900 • ಖಮ್ಮಂ: 08742-228900 • ಬೆಹ್ರಾಂಪುರ್: 0680-2250901 (ಎಲ್ಲಾ ದಿನಗಳಲ್ಲಿ ತೆರೆದಿರುತ್ತದೆ).

Follow us on




KHAZANA JEWELLERY

# ಗೋಲ್ಡನ್ ಡ್ರೀಮ್ಸ್

**ಜ್ಯುವೆಲ್ಲರಿ ಪ್ರೀ-ಬುಕಿಂಗ್ ಪ್ಲಾನ್**

ಆಭರಣ ಖರೀದಿಸುವ ನಿಮ್ಮ ಕನಸು
ಈಗ ಖಜಾನಾ ಜ್ಯುವೆಲ್ಲರಿಯಲ್ಲಿ
ನನಸಾಗಿಸಬಹುದು.

KHAZANA JEWELLERY

# ಗೋಲ್ಡನ್ ಡ್ರೀಮ್ಸ್

**ಜ್ಯುವೆಲ್ಲರಿ ಪ್ರೀ-ಬುಕಿಂಗ್ ಪ್ಲಾನ್**

# ಈಗಲೇ ಪ್ರೀ ಬುಕ್ ಮಾಡಿ.

**ನಿಮ್ಮ ಇಷ್ಟದ ಚಿನ್ನದ ಆಭರಣವನ್ನು ಖರೀದಿಸಿರಿ**

ಖಜಾನಾದ ಪ್ರೀ ಬುಕಿಂಗ್ ಅಡ್ವಾನ್ಸ್ ಪ್ಲಾನ್‌ನ್ನು ಪರಿಚಯಿಸುತ್ತಿದ್ದೇವೆ - ನಿಮ್ಮ ಕನಸಿನ ಚಿನ್ನದ ಆಭರಣ ಪಡೆಯಲು ಒಂದು ಅಚ್ಚುಕಟ್ಟಿನ, ಸುರಕ್ಷಿತ ಮತ್ತು ಅನುಕೂಲಕರ ಆಯ್ಕೆಯಾಗಿದೆ. ವಿವಾಹ ಹಾಗೂ ಹಬ್ಬಗಳಂತಹ ಮಂಗಳಕರ ಕಾರ್ಯಗಳಲ್ಲಿ ಹೆಚ್ಚುತ್ತಿರುವ ಚಿನ್ನದ ದರದ ಸಂದರ್ಭದಲ್ಲಿ ಸಂಪೂರ್ಣ ಮೊತ್ತವನ್ನು ಮುಂಗಡವಾಗಿ ಪಾವತಿಸಿ ನಿಮ್ಮ ಇಷ್ಟದ ಆಭರಣವನ್ನು ಬುಕ್‌ಮಾಡಿ. ಬುಕ್ ಮಾಡಿದ ದಿನದ ದರವನ್ನು ಲಾಕ್ ಮಾಡಲು ಇಂದೇ ಪ್ಲಾನ್‌ನಲ್ಲಿ ನೊಂದಾಯಿಸಿಕೊಳ್ಳಿರಿ. 11 ತಿಂಗಳ ನಂತರ 18% ರವರೆಗೆ ಯಾವುದೇ ಮೇಕಿಂಗ್ ಚಾರ್ಜ್ ಇಲ್ಲದೆ ನಿಮ್ಮ ಆಭರಣವನ್ನು ಖರೀದಿಸಿರಿ.



## ಆಗಾಗ ಕೇಳಲಾಗುವ ಪ್ರಶ್ನೆಗಳು (FAQಗಳು)

### ಪ್ರೀಬುಕಿಂಗ್ ಅಡ್ವಾನ್ಸ್ ಪ್ಲಾನ್ ಎಂದರೇನು?

ಪ್ರೀ ಬುಕಿಂಗ್ ಅಡ್ವಾನ್ಸ್ ಪ್ಲಾನ್ ಗ್ರಾಹಕರಿಗೆ ತಾವು ಆಭರಣಗಳನ್ನು ಖರೀದಿಸುವಾಗ ಏರಿಳಿಕೆಯಾಗುವ ಚಿನ್ನದ ದರಗಳ ಯೋಚನೆಯಿಂದ ಮುಕ್ತವಾಗಿಸುತ್ತದೆ. ಈ ಪ್ಲಾನ್ ನಿಂದಾಗಿ ಗ್ರಾಹಕರು ತಾವು ಬುಕಿಂಗ್ ಮಾಡುವ ದಿನದಂದಿನ ದರವನ್ನು ಸುಭದ್ರಗೊಳಿಸಬಹುದು ಮತ್ತು ಅದನ್ನು ಅವರು 18% ವರೆಗೆ ಯಾವುದೇ ವಿ ಎ (ಮೌಲ್ಯ ಸೇರ್ಪಡೆ) ಇಲ್ಲದೇ ಚಿನ್ನದ ಆಭರಣವನ್ನು ಖರೀದಿಸಲು 11 ತಿಂಗಳವರೆಗೆ ಉಳಿಸಿಕೊಳ್ಳಬಹುದು.

### ನಾನು ಮುಂಗಡ ಪಾವತಿಯನ್ನು ಹೇಗೆ ಪಾವತಿಸುವುದು?

ಪ್ರೀ ಬುಕಿಂಗ್‌ನ್ನು ಹಳೆಯ ಚಿನ್ನ, ನಗದು, ಕ್ರೆಡಿಟ್/ಡೆಬಿಟ್ ಕಾರ್ಡ್‌ಗಳು, ಎನ್ ಇ ಎಫ್ ಟಿ/ಆರ್ ಟಿ ಜಿ ಎಸ್, ಯುಪಿಐ, ಬ್ಯಾಂಕ್ ವರ್ಗಾವಣೆ ಮೂಲಕ ಖಜಾನ ಜ್ಯುವೆಲ್ಲರಿ ಪ್ರೈವೇಟ್ ಲಿಮಿಟೆಡ್. ಮೂಲಕ ಮಾಡಬಹುದು.

### ಈ ಯೋಜನೆಯಲ್ಲಿ ನಾನು ಯಾವಾಗ ಚಿನ್ನದ ಆಭರಣವನ್ನು ಖರೀದಿಸಬಹುದು?

ನೀವು ಮುಂಗಡ ಪಾವತಿಸಿದ ದಿನಾಂಕದಿಂದ 360 ದಿನಗಳು ಅಥವಾ 11 ತಿಂಗಳೊಳಗಾಗಿ ಚಿನ್ನದ ಆಭರಣವನ್ನು ಖರೀದಿಸಬಹುದು. ಮುಂಗಡ ಪಾವತಿಯಾದ ದಿನಾಂಕದಿಂದ 360 ದಿನಗಳೊಳಗಾಗಿ ಖರೀದಿ ಮಾಡದಿದ್ದಲ್ಲಿ ಮುಂಗಡ ಮೊತ್ತವನ್ನು ರೀಫಂಡ್ ಮಾಡಲಾಗುವುದಿಲ್ಲ.

### ನಾನು 360 ದಿನಗಳೊಳಗಾಗಿ ಚಿನ್ನದ ಆಭರಣ ಖರೀದಿಸದಿದ್ದಲ್ಲಿ ಏನಾಗುತ್ತದೆ?

ನೀವೊಂದು ವೇಳೆ ಡಿಫಾಲ್ಟ್ ಆಗಿ ಮುಂಗಡ ಪಾವತಿಯಾದ ದಿನಾಂಕದಿಂದ 360 ದಿನಗಳೊಳಗಾಗಿ ಚಿನ್ನದ ಆಭರಣ ಖರೀದಿ ಮಾಡದಿದ್ದಲ್ಲಿ ನೀವು ಅದರ ಡೆಲಿವರಿ ಪಡೆಯುವವರೆಗೆ ಕಂಪನಿಗೆ ನಿಮ್ಮ ಹೆಸರಿನಲ್ಲಿ ಅನ್ವಯಿತ ಜಿಎಸ್ ಟಿಯೊಂದಿಗೆ ಸೇಲ್ ಇನ್ ವಾಯ್ಸ್ ಮೂಲಕ ಚಿನ್ನವನ್ನು ನೀವು ಡೆಲಿವರಿ ತೆಗೆದುಕೊಳ್ಳುವವರೆಗೆ ಸೇಫ್ ಕಸ್ಟಡಿಯಲ್ಲಿಡಲು ಅವಕಾಶ ನೀಡಬೇಕಾಗುತ್ತದೆ .

### ನಾನೊಂದು ವೇಳೆ ಮುಂಗಡವನ್ನು ಪ್ರೀಕ್ಲೋಸ್ ಮಾಡಿದರೆ ಏನಾಗುತ್ತದೆ?

ನೀವೊಂದು ವೇಳೆ ಮುಂಗಡ ಪಾವತಿಯಾದಂದಿನಿಂದ 180 ದಿನಗಳೊಳಗಾಗಿ ಮುಂಗಡವನ್ನು ಪ್ರೀಕ್ಲೋಸಿಂಗ್ ಮಾಡಿದರೆ ಆಗ ನೀವು ವೇಸ್ಟೇಜ್ (ವಿಎ) ಮೇಲೆ ಯಾವುದೇ ರಿಯಾಯಿತಿ ಪಡೆಯಲು ಅರ್ಹರಾಗುವುದಿಲ್ಲ. ಆದ್ದಾಗ್ಯೂ ನೀವು ಮುಂಗಡವನ್ನು ಪ್ರೀಕ್ಲೋಸ್ ಮಾಡಿದರೆ 180 ದಿನಗಳ ನಂತರ ಆದರೆ 330 ದಿನಗಳೊಳಗಾಗಿ ನೀವು ಕ್ಲೋಸರ್ ಬೆನಿಫಿಟ್ ಕಾಯ್ದೆಯನುಸಾರ ವೇಸ್ಟೇಜ್ (ವಿಎ) ಮೇಲೆ ರಿಯಾಯಿತಿ ಪ್ರಯೋಜನಕ್ಕೆ ಅರ್ಹರಾಗುತ್ತೀರಿ.

### ಜಿ ಎಸ್ ಟಿ ಇದೆಯೇ?

ಹೌದು, ಜಿಎಸ್ ಟಿ ಮತ್ತು ಇತರ ಯಾವುದೇ ಸರ್ಕಾರಿ ತೆರಿಗೆಗಳನ್ನು ಬಿಲ್ಲಿಂಗ್ ಸಮಯದಲ್ಲಿ ನೀವು ಪಾವತಿಸಬೇಕಾಗುತ್ತದೆ.

### ನಾನೊಂದು ವೇಳೆ ಪ್ರೀ ಬುಕ್ ಮಾಡಿರುವುದಕ್ಕಿಂತ ಹೆಚ್ಚಿನ ತೂಕದ ಚಿನ್ನದ ಆಭರಣ ಖರೀದಿ ಮಾಡಿದರೆ ಏನಾಗುತ್ತದೆ?

ನೀವೊಂದು ವೇಳೆ ಪ್ರೀಬುಕ್ ಮಾಡಿರುವುದಕ್ಕಿಂತ ಹೆಚ್ಚಿನ ತೂಕದ ಆಭರಣವನ್ನು ಖರೀದಿಸಿದರೆ, ಹೆಚ್ಚಿನ ತೂಕದ ಚಿನ್ನಕ್ಕೆ ನೀವು ಅನ್ವಯಿತ ಹೆಚ್ಚುವರಿ ವೇಸ್ಟೇಜ್ (ವಿಎ)ನ್ನು ಪಾವತಿಸಬೇಕಾಗುತ್ತದೆ.

### ನಾನು ಚಿನ್ನದ ನಾಣ್ಯಗಳನ್ನು ಖರೀದಿಸಬಹುದೇ?

ಖಂಡಿತವಾಗಿಯೂ, ನೀವು ವೇಸ್ಟೇಜ್ (ವಿಎ) ಮತ್ತು ತಯಾರಿಕಾ ಶುಲ್ಕವಿಲ್ಲದೇ ಚಿನ್ನದ ನಾಣ್ಯಗಳನ್ನು ಖರೀದಿಸಬಹುದು.

### ನಗದು ಹಿಂದಿರುಗಿಸಲಾಗುವುದೇ(ರೀಫಂಡ್) ?

ಸರ್ಕಾರದ ನಿಯಮದ ಅನುಸಾರ ಯಾವುದೇ ಸಂದರ್ಭದಲ್ಲಿ ನಗದು ರೀಫಂಡ್ (ಹಿಂದಿರುಗಿಸಲಾಗುವುದಿಲ್ಲ) ಮಾಡಲಾಗುವುದಿಲ್ಲ.

### ಈ ಯೋಜನೆಗೆ ಸೇರಲು ಕನಿಷ್ಠ ಮತ್ತು ಗರಿಷ್ಠ ಮೊತ್ತವೆಷ್ಟು?

ಕನಿಷ್ಠ 10,000 ಮತ್ತು ಗರಿಷ್ಠ ಮೊತ್ತಕ್ಕೆ ಯಾವುದೇ ಮಿತಿಯಿಲ್ಲ. ಆದ್ದಾಗ್ಯೂ ಸರ್ಕಾರದ ನಿಯಮದ ಪ್ರಕಾರ, 2 ಲಕ್ಷಕ್ಕಿಂತ ಹೆಚ್ಚಾದಲ್ಲಿ ಗ್ರಾಹಕರ ಪ್ಯಾನ್ ಸಂಖ್ಯೆಯು ಬೇಕಾಗುತ್ತದೆ.

### ಚಿನ್ನದ ಆಭರಣಕ್ಕಿಂತ ಬೇರೆ ಏನಾದರು ನಾನು ಖರೀದಿಸಬಹುದೇ?

ಇಲ್ಲ, ನೀವು ಚಿನ್ನದ ನಾಣ್ಯ ಒಳಗೊಂಡಂತೆ ಚಿನ್ನದ ಆಭರಣಗಳನ್ನು ಮಾತ್ರ ಖರೀದಿಸಬಹುದು. ಈ ಯೋಜನೆಯು ವಜ್ರ/ಪ್ಲಾಟಿನಂ/ಬೆಳ್ಳಿಯ ವಸ್ತುಗಳ ಖರೀದಿಗೆ ಅನ್ವಯಿಸುವುದಿಲ್ಲ.

### ಈ ಯೋಜನೆಯು ಇತರ ಆಫರ್ ಗಳೊಂದಿಗೆ ಕ್ಲಬ್ ಆಗುತ್ತದೆಯೇ?

ಇಲ್ಲ, ಇದು ಒಂದು ವಿಶಿಷ್ಟ ಯೋಜನೆಯಾಗಿದೆ ಮತ್ತು ಇತರ ಯಾವುದೇ ಯೋಜನೆ /ಆಫರ್‌ಗಳೊಂದಿಗೆ ಜೋಡಿಸಲಾಗುವುದಿಲ್ಲ.

### ನಾನು ಯಾವುದೇ ಖಜಾನಾ ಶೋರೂಂನಿಂದ ಚಿನ್ನದ ಆಭರಣಗಳನ್ನು ಖರೀದಿಸಬಹುದೇ?

ಹೌದು, ನೀವು ಭಾರತದಲ್ಲಿರುವ ಯಾವುದೇ ಖಜಾನ ಶೋ ರೂಮ್ ನಿಂದ ಚಿನ್ನದ ಆಭರಣ ಖರೀದಿಸಬಹುದು.

